

# ಬೇಟೆಯಲ್ಲ ಆಟವೆಲ್ಲ

## ಹೊಸ ಎತ್ತರದಲ್ಲಿ ಚೆಸ್ ಚಾಂಪಿಯನ್ ಕಾರ್ಲ್‌ಸನ್

ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ಬರುವ ನವೆಂಬರ್ 30ಕ್ಕೆ 32 ವರ್ಷ ತುಂಬುತ್ತದೆ. ಕಿರಿಯ ವಯಸ್ಸಿನಲ್ಲಿ ಹಲವು ಪ್ರಥಮಗಳನ್ನು ಸಾಧಿಸಿರುವ ಕಾರ್ಲ್‌ಸನ್ ಆಟದ ಕಣದಲ್ಲಿ ಬೇಟೆಗಾರನಂತೆ ವರ್ತಿಸುವವರು. ಅವರೀಗ ಚಾಂಪಿಯನ್ ಆಗಿಯಷ್ಟೇ ಉಳಿದಿಲ್ಲ; ಅವರೊಂದು ದಂತಕಥೆ.

■ ಪ್ರಮೋದ

ಒಂದು ಉಪಯುಕ್ತ ಪುಸ್ತಕದ ಓದು ಮತ್ತು ಗೆಲುವಿನ ಛಲ ಜಗತ್ತಿಗೆ ಚದುರಂಗದ ಚತುರನಾಗುವಂತೆ ಮಾಡಬಹುದೇ?

ಐದು ಬಾರಿಯ ವಿಶ್ವ ಚೆಸ್ ಚಾಂಪಿಯನ್ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ವಿಷಯದಲ್ಲಿ ಇದು ‘ಹೌದು’ ಎನ್ನಬಹುದು.

ಬಾಲ್ಯದಲ್ಲಿ ಪೋಷಕರ ಒತ್ತಾಯಕ್ಕೆ ಮಣಿದು ಕಾರ್ಲ್‌ಸನ್ ಐದನೇ ವಯಸ್ಸಿನಲ್ಲಿ ಚೆಸ್ ರೂಢಿಸಿಕೊಂಡರು. ಮೊದಲು ಈ ಕ್ರೀಡೆಯಲ್ಲಿ ಅಷ್ಟೊಂದು ಆಸಕ್ತಿಯಿಲ್ಲದಿದ್ದರೂ ಕಠಿಣ ನಡೆಗಳನ್ನು ಬಿಡಿಸುವಲ್ಲಿ ನಿರಂತರ ಪ್ರಯತ್ನ ಮಾಡುತ್ತ ಚೆಸ್ ಅವರಿಗೆ ಇಷ್ಟವಾಗತೊಡಗಿತು. ಈ ಆಸಕ್ತಿಗೆ ದೊಡ್ಡ ಹುರುಪು ತುಂಬಿದ್ದು ‘ಫೈಂಡ್ ದಿ ಪ್ಲಾನ್’ ಪುಸ್ತಕ. ಈ ಕೃತಿಯ ಲೇಖಕ ಬೆಂಟ್ ಲಾರ್ಸೆನ್ ಡೆನ್ಮಾರ್ಕ್‌ನ ಹೆಸರಾಂತ ಚೆಸ್ ಆಟಗಾರ. 1956ರಲ್ಲಿ ಗ್ರ್ಯಾಂಡ್‌ಮಾಸ್ಟರ್ ಗೌರವ ಪಡೆದವರು. ಲಾರ್ಸೆನ್ ನಾಲ್ಕು ಬಾರಿ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಆಡಿದ್ದಾರೆ. ಇವರ ಪುಸ್ತಕದಿಂದ ಕಾರ್ಲ್‌ಸನ್ ಚೆಸ್ ವೃತ್ತಿಪರವಾಗಿ ಸ್ವೀಕರಿಸಿ ಅನೇಕ ಸವಾಲುಗಳನ್ನು ಎದುರಿಸಿದರು. ದಾಖಲೆಗಳನ್ನೂ ಬರೆದರು.

ಕಾರ್ಲ್‌ಸನ್ ತಂದೆ ಹವ್ಯಾಸಿ ಉತ್ಸಾಹಿ ಚೆಸ್ ಆಟಗಾರ. ಮೂವರು ಸಹೋದರಿಯರು ಕೂಡ ಇದೇ ಕ್ರೀಡೆಯಲ್ಲಿ ಆಸಕ್ತಿ ಹೊಂದಿದ್ದರು. ಆಟದ ಕೌಶಲಗಳನ್ನು ಕಲಿಯುವ ಹಂತದಲ್ಲಿ ಗಂಟೆಗಟ್ಟಲೆ ಅಭ್ಯಾಸ ಮಾಡುತ್ತಿದ್ದರು. ಕಾಯಿಗಳನ್ನು ಮುನ್ನಡೆಸುವುದು, ಸಂಯೋಜನೆಗಳನ್ನು ಹುಡುಕುವುದು, ತಂದೆ ತೋರಿಸಿದ ಆಟ ಮತ್ತು ಸ್ಥಾನಗಳನ್ನು ಮರು ಅಭ್ಯಾಸ ಮಾಡುವುದು ಪ್ರಮುಖವಾಗಿತ್ತು.

ಕಾರ್ಲ್‌ಸನ್ ಅಗಾಧ ನೆನಪಿನ ಶಕ್ತಿ ಕೂಡ ಚೆಸ್‌ನಲ್ಲಿ ಯಶಸ್ಸು ಸಾಧಿಸಲು ಕಾರಣವಾಗಿದೆ. ನಾರ್ವೆಯ ಈ ಆಟಗಾರ ಐದನೇ ವಯಸ್ಸಿನಲ್ಲಿ ಜಗತ್ತಿನ ಎಲ್ಲಾ ದೇಶಗಳ ಪ್ರಮುಖ ಸ್ಥಳಗಳು, ಜನಸಂಖ್ಯೆ, ಧ್ವಜಗಳು ಮತ್ತು ರಾಜಧಾನಿಗಳನ್ನು ಕಂಠಪಾಠ ಮಾಡಿ ಹೇಳುತ್ತಿದ್ದ. ಕಾರ್ಲ್‌ಸನ್ ಅಕ್ಕ – ‘ನನ್ನನ್ನು ಸೋಲಿಸಲು ನಿನಗೆ ಆಗುವುದಿಲ್ಲ’ ಎಂದು ಸದಾ ಛೇಡಿಸುತ್ತಿದ್ದಳು. ಅಕ್ಕನ ಎದುರು ಗೆಲುವು ಸಾಧಿಸಬೇಕು ಎನ್ನುವ ಹಂಬಲವೂ ಚೆಸ್ ಆಡಲು ಪ್ರೇರಣೆಯಾಯಿತು. ಜಗತ್ತಿಗೆ ಶ್ರೇಷ್ಠ ಆಟಗಾರ ಎನ್ನುವ ಹಿರಿಮೆ ಲಭಿಸಲು ಕಾರಣವಾಯಿತು.